

ಕಲ್ಯಾಣಕುಮಾರ್ ಜತೆ





ಹಿರಿಮೆ. ಅವರ ಅಭಿನಯದ 'ಜೀಸಸ್' ಕಾಂಚಾಣ ಹರಿಸಿತ್ತು.

ಮೊದಲು ಚಿತ್ರರಂಗಕ್ಕೆ ಕನ್ನಡದ ಮೂಲಕ ಪ್ರವೇಶಿಸಿದ ಜಯಲಲಿತಾ ಬೇಡಿಕೆಯ ನಟಿಯಾಗಿ ಬೆಳೆದಿದ್ದರಿಂದ ಕಲ್ಯಾಣ್ ಕುಮಾರ್ ಬಿಟ್ಟು ಬೇರೆ ನಾಯಕರೊಂದಿಗೆ ನಟಿಸಲು ಸಾಧ್ಯವಾಗಲಿಲ್ಲ. ಆದರೆ ಕೆಲವು ತಮಿಳು ಚಿತ್ರಗಳಲ್ಲಿ ಕಲ್ಯಾಣ್‌ಗೆ ಅವರು ನಾಯಕಿಯಾಗಿ ಅಭಿನಯಿಸಿದರು.

## ಗಲ್ಲಾಪೆಟ್ಟಿಗೆಯಲ್ಲಿ ವಿಜಯ

ಬಿಡುವಿಲ್ಲದ ಈ ಗ್ಲಾಮರಸ್ ನಟಿ ದಕ್ಷಿಣ ಭಾರತ ಮಾತ್ರವಲ್ಲ, ಇಡೀ ಭಾರತೀಯ ಚಿತ್ರರಂಗದಲ್ಲಿ ಅತಿ ಹೆಚ್ಚು ಸಂಭಾವನೆ ಪಡೆಯುವ ದಾಖಲೆಗೂ ಪಾತ್ರರಾಗಿದ್ದರು ಜಯಲಲಿತಾ. ಅವರು ನಟಿಸಿದ ಬಹುತೇಕ ಎಲ್ಲಾ ಚಿತ್ರಗಳೂ ಹಿಟ್ ಎನ್ನಿಸಿಕೊಂಡವು. 140 ಚಿತ್ರಗಳಲ್ಲಿ 120 ಚಿತ್ರಗಳು ಗಲ್ಲಾಪೆಟ್ಟಿಗೆಯಲ್ಲಿ ಜಯ ಸಾಧಿಸಿದ್ದೊಂದು ದಾಖಲೆ.

ಕೌಟುಂಬಿಕ ಚಿತ್ರಗಳಲ್ಲಿ ನಟಿಸುತ್ತಿದ್ದ ನಟಿಯರನ್ನೆಲ್ಲಾ ಬದಿಗೆ ಸರಿಸಿದ ಜಯಲಲಿತಾ ಯಾವುದೇ ಸಹನಟಿಯರೊಂದಿಗೆ ವಿವಾದ ಸೃಷ್ಟಿಸಿಕೊಳ್ಳಲಿಲ್ಲ. ಅವರೊಡನೆ ಸೌಹಾರ್ದವಾಗಿ ಇದ್ದ ಅವರು ಗಾಳಿ ವಾರ್ತೆಗಳಿಗೆ ಅನೇಕ ಸಂದರ್ಭಗಳಲ್ಲಿ ಸಿಕ್ಕಿಬಿದ್ದಿದ್ದೂ ಹೌದು.

ಎಂ.ಜಿ.ಆರ್. ಅವರೊಂದಿಗೆ ಇವರ ಹೆಸರು ಥಳುಕು ಹಾಕಿಕೊಂಡಿದ್ದರೂ ನಂತರ ಅದು ತಣ್ಣಗಾಗಿತ್ತು. ಆದರೆ ಎಂ.ಜಿ.ಆರ್. ರಾಜಕಾರಣಕ್ಕೆ ಜಯಾ ಅವರನ್ನು ಸಜ್ಜುಗೊಳಿಸುವುದನ್ನು ಮುಂದುವರೆಸಿದ್ದರು. ತೆಲುಗಿನ ಸುರುದ್ರೂಪಿ ನಟ ಶೋಭನ್ ಬಾಬು ಅವರೊಂದಿಗೆ ಜಯಲಲಿತಾ ಹೆಸರು ಸ್ವಲ್ಪ ಕಾಲ ಸೇರಿತ್ತು. ಇವು ಕೊನೆಗೆ 'ಗಾಸಿಪ್' ಎಂದಾಯಿತು.

ಮುಟ್ಟಿದ್ದೆಲ್ಲ ಚಿನ್ನವಾಗುತ್ತಿದ್ದ ಜಯಲಲಿತಾ ಅವರನ್ನೇ ಕೇಂದ್ರವಾಗಿಟ್ಟು ಕೊಂಡು ಹಲವು ಚಿತ್ರಗಳು ತೆರೆಗೆ ಬಂದವು. ಪುರುಷ ಪ್ರಧಾನವಾಗಿರುವ ಸಿನಿಮಾದಲ್ಲಿ ಇದು ಅಚ್ಚರಿಯ ಬೆಳವಣಿಗೆಯಾದರೂ ಹೀರೋಗಳ್ಯಾರೂ ಇದರ ಬಗ್ಗೆ ಅಸಹನೆ ತೋರಲಿಲ್ಲ. ನಾಯಕಿಯ ಸುತ್ತ ಹೆಣೆದಿದ್ದ ಚಿತ್ರಗಳಲ್ಲೂ ಜಯಾ ಖ್ಯಾತಿ ಗಳಿಸಿದರು. ಕುಮಾರಿ ಪೆಣ್, ಗೌರಿ ಕಲ್ಯಾಣಂ ಮೊದಲಾದ ಶೀರ್ಷಿಕೆಯ ಚಿತ್ರಗಳಲ್ಲಿ ಪ್ರಸಿದ್ಧ ನಾಯಕ ನಟರು ಜಯಾ ಅವರೊಂದಿಗೆ ಅಭಿನಯಿಸಿದ್ದರು. ಈ ಬಗ್ಗೆ ಯಾರೂ ತಕರಾರು ಎತ್ತಿರಲಿಲ್ಲ.

ಅಭಿನಯಿಸಿದ ಎಲ್ಲಾ ಚಿತ್ರಗಳಲ್ಲೂ ರೊಮ್ಯಾಂಟಿಕ್ ಆಗಿಯೇ ಕಾಣಿಸಿಕೊಂಡ ಜಯಲಲಿತಾ ಎಲ್ಲಾ ಬಗೆಯ ಪೋಷಾಕು ಧರಿಸಲು ಹಿಂದೆ ಮುಂದೆ ನೋಡಲಿಲ್ಲ. ಅದು ಗೌನ್ ಇರಲಿ, ಸ್ಕರ್ಟ್ ಇರಲಿ ಯಾವುದಕ್ಕೂ ಇಲ್ಲ ಎನ್ನುತ್ತಿರಲಿಲ್ಲ.

## 'ಸುಧಾ'ದಲ್ಲಿ ಚಿತ್ರ

ಪ್ರವರ್ಧಮಾನಕ್ಕೆ ಬರುತ್ತಿದ್ದ ಕನ್ನಡದ ಕುಡಿಯನ್ನು ಪರಿಚಯಿಸಲು 'ಸುಧಾ' ವಾರಪತ್ರಿಕೆಯ ಸಂಪಾದಕರಾದ ಎಂ.ಬಿ. ಸಿಂಗ್, ಛಾಯಾಗ್ರಾಹಕ ಭವಾನಿ ಲಕ್ಷ್ಮೀನಾರಾಯಣ್ ಅವರನ್ನು ಮದ್ರಾಸ್‌ಗೆ ಕಳಿಸಿದ್ದರು. ಜಯಾ ಚಿತ್ರ–ಪರಿಚಯ 'ಸುಧಾ'ದಲ್ಲಿ ಪ್ರಕಟವಾದ ನಂತರ ಜಯಾ ತಾಯಿ ಸಂಧ್ಯಾ, ಛಾಯಾಗ್ರಾಹಕ ಲಕ್ಷ್ಮೀನಾರಾಯಣ್‌ಗೆ ಪತ್ರ ಬರೆದು ಕೃತಜ್ಞತೆ ಸಲ್ಲಿಸಿದ್ದರು.

ನಾಟಕಗಳಲ್ಲಿ ತಾವು ಜೋಡಿಯಾಗಿದ್ದ ಚೋ. ರಾಮಸ್ವಾಮಿ ಅವರೊಂದಿಗೆ ಅವರೇ ಹೀರೊ ಆಗಿದ್ದು ನಿರ್ದೇಶಿಸಿದ ಚಿತ್ರದಲ್ಲಿ ನಾಯಕಿಯಾಗಿ ನಟಿಸಿದ ಜಯಲಲಿತಾ ಕಾಣಿಸಿಕೊಂಡ ಚಿತ್ರಗಳ ಸೂಪರ್ ಡೂಪರ್ ಹಿಟ್ ಆಗಿದ್ದು ನೂರಕ್ಕೂ ಹೆಚ್ಚು. ಶತದಿನೋತ್ಸವ, ಸುವರ್ಣ ಮಹೋತ್ಸವ ಕೊನೆಗೆ ಅಮೃತ ಮಹೋತ್ಸವವನ್ನೂ ಆಚರಿಸಿಕೊಂಡ 3 ಡಜನ್ ಚಿತ್ರಗಳು ತಮಿಳು, ತೆಲುಗು ಚಿತ್ರರಂಗದಲ್ಲಿ ಗಲ್ಲಾಪೆಟ್ಟಿಗೆಯನ್ನು ಚೂರು ಚೂರು ಮಾಡಿದ್ದವು.

ಎಂ.ಜಿ.ಆರ್. ಅವರೊಂದಿಗೆ ರಾಜಕೀಯದಲ್ಲಿ ಸಕ್ರಿಯರಾಗಿ ರಾಜ್ಯಸಭೆಯನ್ನು ಪ್ರವೇಶಿಸಿದ ಜಯಲಲಿತಾ ಅಭಿನಯಿಸುವುದನ್ನು ತಗ್ಗಿಸಿಕೊಂಡರು. ಚಿತ್ರರಂಗದ ಅನಭಿಷಿಕ್ತ ರಾಣಿ ಅನ್ನಿಸಿಕೊಂಡಿರುವಾಗಲೇ ತಣ್ಣಗೆ ರಾಜಕಾರಣ ದತ್ತ ಹೆಜ್ಜೆಹಾಕಿದ ಜಯಾ ಅವರು ಚಿತ್ರ ಜೀವನದಲ್ಲಿ ನಟಿಸಿದ ಕೊನೆಯ ಚಿತ್ರ 'ದಿಯ್ಯೆ ತೇದಿ ವಂದಕಡಲ್' ಅದು ಬಿಡುಗಡೆಯಾದದ್ದು 1980ರಲ್ಲಿ.

ಹದಿಹರೆಯದಲ್ಲೇ ಚಿತ್ರಭೂಮಿಯಲ್ಲಿ ಕಾಲಿಟ್ಟು ನಿರಂತರವಾಗಿ ನಡೆದು ರಾಜಕಾರಣ ಮೈದಾನದಲ್ಲೂ ಹೆಜ್ಜೆ ಮೂಡಿಸಿದ ಜಯಲಲಿತಾ ಖ್ಯಾತ ಕ್ರಿಕೆಟ್ ಪಟು ನಾರಿ ಕಂಟ್ರಾಕ್ಟರ್ ಅವರ ಬಗ್ಗೆ ಪ್ರೀತಿ ಇಟ್ಟುಕೊಂಡಿದ್ದರು. ನಟ ಶಮ್ಮಿಕಪೂರ್ ಅಭಿಮಾನಿಯಾಗಿದ್ದರು. ಚಿತ್ರ ಜಗತ್ತಿನಲ್ಲಿ ಮೋಹಕ ನಟಿ ಎನ್ನಿಸಿಕೊಂಡಿದ್ದ ಜಯಲಲಿತಾ ರಾಜಕಾರಣ ಲೋಕದಲ್ಲಿ ಕ್ರಾಂತಿಕಾರಿ ನಾಯಕಿ ಎಂದೇ ಖ್ಯಾತಿ ಪಡೆದರು.

ಯಾವಾಗಲೂ ಮುಗುಳ್ನಗೆ ಚೆಲ್ಲುತ್ತಿದ್ದ ಜಯಾ ಸೋಲುಗಳನ್ನು ಗೆಲುವಿನ ಮೆಟ್ಟಿಲುಗಳಾಗಿ ಮಾಡಿಕೊಂಡರು. ರಾಜಕೀಯಕ್ಕೆ ಚಿಮ್ಮುಹಲಗೆಯಾಗಿದ್ದ ಚಿತ್ರರಂಗದಲ್ಲಿ ಅವರೆಂದೂ ಸೋಲು ಎನ್ನುವುದನ್ನು ಕಂಡಿರಲಿಲ್ಲ. ಚಿತ್ರರಂಗದ ಅದ್ಭುತ ಯಶಸ್ಸಿನ ಅಲೆಗಳಲ್ಲಿ ತೇಲಿ ಸಾರ್ವಜನಿಕ ಬದುಕಿನಲ್ಲಿ ಕಾಣಿಸಿಕೊಂಡ ನೇರ, ನಿಷ್ಠುರ ಮನೋಭಾವದ ಜಯಲಲಿತಾ ಚಿತ್ರರಂಗದಲ್ಲಿ ಎಲ್ಲರಿಗೂ ಸ್ನೇಹಮಯಿ ಆಗಿದ್ದರು. ಬಾಲ್ಯದ ಹೆಸರು ಕೋಮಲವಲ್ಲಿ ಮರೆತೇ ಹೋಗಿದೆ. ಆದರೆ ಆಕೆ ತನ್ನ ಕನಸುಗಳನ್ನು ನನಸು ಮಾಡಿಕೊಂಡ ಸಾಹಸ ಮಾತ್ರ ಈಗ ಮನೆಮಾತಾಗಿದೆ.